ಜಾಕೋಬ್ ಡಿಸೋಜ, ಕುರುವಳ್ಳಿ

*ಯಾವುದೇ ವಿಷಯ ಬಂದಾಗ ಅಡ್ಡಬಾಯಿ ಹಾಕುವವರಿಗೆ ಏನೆನ್ನಬೇಕು?*




ಆರ್‌ನಬ್ ಗೋಸ್ವಾಮಿ.

ದವಾಡಿ ಈರಣ್ಣ, ಹಳ್ಳದಕೇರಿ

*ಜಗತ್ತಿನಲ್ಲಿ ಅತಿ ಹೆಚ್ಚು ಬಳಕೆ ಆಗುತ್ತಿರುವ ಪದ ಯಾವುದು?*

ಫೇಸ್‌ಬುಕ್!

ಕೆ. ಕೃಷ್ಣ ಮಧ್ಯಸ್ಥ, ಸಾಗರ

*ಹೆಣ್ಣುಮಗಳೊಬ್ಬಳಿಂದ ಮು.ಮಂ. ಬೆಲೆಕಟ್ಟಲಾಗದ ಮುತ್ತೊಂದನ್ನು ಗಿಫ್ಟ್ ಪಡೆದಿದ್ದನ್ನು ಭ್ರಷ್ಟಾಚಾರನಿಗ್ರಹ ದಳಕ್ಕೆ ದೂರು ಸಲ್ಲಿಸಬಹುದೆ?*

ಅದು ಗಿಫ್ಟ್ ಅಲ್ಲ; ಕಪ್ಪೆ ಮತ್ತು ಸುಂದರಿ ಕಥೆಯಂತೆ ಮುತ್ತು ಕೊಟ್ಟರೆ ಸಿಎಮ್ಮೂ ರಾಜಕುಮಾರ ಆಗುವರೇನೋ ಎಂದು ಮಾಡಿದ ಟೆಸ್ಟು.

ನಾರಾಯಣ ಎಸ್. ತೋನ್ಸೆ, ಕೆಮ್ಮಣ್ಣು

*ದೇವಸ್ಥಾನಗಳಲ್ಲಿ ಕಳ್ಳತನ ಆಗುವಾಗ ದೇವರು ಎಲ್ಲಿ ಇರುತ್ತಾನೆ?*



ನಿಮ್ಮ ಹೊಟ್ಟೆಯಲ್ಲಿ ಜಂತುಹುಳು ಬಿದ್ದಾಗ ನೀವೆಲ್ಲಿರುತ್ತೀರಿ? ದೇಗುಲದಲ್ಲಿ ದೇವನಲ್ಲ; ದೇವನಲ್ಲಿ ಜಗ.

ರತ್ನಜ, ಮೈಸೂರು

*ಚಿತೆಗೂ, ಚಿಂತೆಗೂ ಮಧ್ಯೆ ಇರುವ ಸೊನ್ನೆ ಬಿಟ್ಟು ಬೇರೇನು ವ್ಯತ್ಯಾಸವಿದೆ ರಾಂಜಿ?*

ಚಿಂತೆ ಬಸ್ ರೂಟು; ಚಿತೆ ಲಾಸ್ಟ್ ಬಸ್ ಸ್ಟಾಪ್.

ಮಂಜುಳಾ ಬಿ. ಬಿದರಿ, ಬಸವನಬಾಗೇವಾಡಿ

*ರಾಜಕಾರಣಿಗಳು ಮೂರೂ ಬಿಟ್ಟವರು ಅಂತಾರಲ್ಲ, ಆ ಮೂರು ಯಾವುವು?*

ವಸೂಲಾತಿಗೆ ಗೂಂಡಾ, ಚೇಲಾ; ಸಿಕ್ಕಿಬಿದ್ದಾಗ ಕಣ್ಣಣ್ಣು!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಜಗತ್ತಿನ ತಾಪಮಾನ ಹೆಚ್ಚಿಸುತ್ತಿರುವವರು ಯಾರು?*

ಜೆನಿಫರ್ ಆನಿಸ್ಟನ್, ಜೆಸ್ಸಿಕಾ ಆಲ್ಬಾ, ಶಕೀರಾ, ಪ್ರಿಯಾಂಕಾ ಛೋಪ್ರಾ, ಸನ್ನಿ ಲಿಯೋನ್...

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ಕನಸುಗಳೆಲ್ಲ ನಿಜವಾದರೆ ಏನಾಗುತ್ತಿತ್ತು ರಾಮ್‌ಜಿ?*

ಪ್ರತಿ ಸುಂದರ ನಟಿಯೂ ಸಾವಿರಾರು ಪಡ್ಡೆ ಹುಡುಗರನ್ನು ಮದುವೆಯಾಗಬೇಕಾಗುತ್ತಿತ್ತು.

ರಾಜು ಎಸ್. ಗಾಲಿ, ಅಥಣಿ

*ಸರ್ಕಾರದ ಅಂಕುಡೊಂಕುಗಳನ್ನು ತಿದ್ದುವವರೇ ತಪ್ಪು ಮಾಡಿದಾಗ ಅವರಿಗೆ ಏನು ಶಿಕ್ಷೆ?*

ಸನ್ಮಾನ! ಅಸಲಿಗೆ ಅಂಕುಡೊಂಕುಗಳನ್ನು ತಿದ್ದುವುದೇ ಸರ್ಕಾರದ ದೃಷ್ಟಿಯಲ್ಲಿ ಅಪರಾಧ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಚರಿತ್ರೆಗೂ, ಚಾರಿತ್ರ್ಯಕ್ಕೂ ಏನು ವ್ಯತ್ಯಾಸ?*

ಒಂದು ಗತ; ಇನ್ನೊಂದು ವ್ರತ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

*ನಗೆಯರಳಿಸುವ ನಿಮ್ಮ ಉತ್ತರಗಳಿಂದ ಓದುಗರ ಆಯಸ್ಸು ವೃದ್ಧಿಸಿ ಯಮಲೋಕ 'ಬಿಕೋ' ಎಂದು, ಯಮನಿಗೆ ಕೋಪ ಬಂದರೆ?*

ಯಮನಿಗೂ ಈ ಅಂಕಣ ತಲುಪಿಸಿಬಿಟ್ಟರಾಯ್ತು. ನಗೆ ಇರುವ ಕಡೆ ಧಗೆ ಇರುವುದಿಲ್ಲ.

ಕೆ.ಆರ್. ರಾಮಚಂದ್ರ, ಬೈಲಹೊಂಗಲ

*ದೇವರು ನಮ್ಮ ಅಂತರಂಗದಲ್ಲಿರುವನು ಎನ್ನುವರೂ ಬೇರೆ ಬೇರೆ ದೇವಸ್ಥಾನಕ್ಕೆ ಭೇಟಿ ನೀಡುವರು. ಏಕೆ?*

ಇದು ಅಂತ ರಂಗ; ಆದಿ ರಂಗ, ಮಧ್ಯ ರಂಗಗಳಲ್ಲಿ ಹೇಗಿರುವನೆಂದು ಅರಿಯಬೇಕಲ್ಲ.

ವಿಶಾಲಾಕ್ಷಿ ಸಿ. ಬೆಂಗಳೂರು

*ಕಂಡಕಂಡಲ್ಲಿ ಬಹಿರಂಗವಾಗಿ ಮೂತ್ರ ವಿಸರ್ಜಿಸುವ ಈ ಗಂಡಸರಿಗೆ ಬುದ್ಧಿ ಬರೋದು ಯಾವಾಗ?*

ಫೋಟೋ ಹಿಡಿದು ಫೇಸ್ಬುಕ್ಕಲ್ಲಿ ಹಾಕಿ ಅವರ ಮಕ್ಕಳಿಗೂ ಟ್ಯಾಗ್ ಮಾಡಿದಾಗ.

## ಬಹುಮಾನಿತ ಪ್ರಶ್ನೆ

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಉದ್ದಕ್ಕೆ ಬೆಳೆಯುವುದಕ್ಕೂ, ಎತ್ತರಕ್ಕೆ ಬೆಳೆಯುವುದಕ್ಕೂ ಏನು ವ್ಯತ್ಯಾಸ?*

ಉದ್ದಕ್ಕೆ ಬೆಳೆಯುವುದು ಸೀರಿಯಲ್; ಎತ್ತರಕ್ಕೆ ಬೆಳೆಯುವುದು ಮಾಡಬೇಕಾದ ಕೆಲಸಗಳ ರಾಶಿ.

ಅರ್ಚನಾ ವಿ. ರಾವ್, ಬೆಂಗಳೂರು

*ಉಪ್ಪಿಗಿಂತ ರುಚಿಯಿಲ್ಲ. ಉಪ್ಪಿಟ್ಟಿಗಿಂತ...?*

ಅಲರ್ಜಿ ಇಲ್ಲ.

ಆರತಿ ಘಟಿಕಾರ್, ದುಬೈ

*ಪತಿಯ ಮೌನಕ್ಕೆ ಏನೇನು ಅರ್ಥಗಳಿವೆ?*

ಮೌನದೊಡನೆ ಘಮ್ಮನೆ ವಾಸನೆ ಇದೆಯೋ ಇಲ್ಲವೋ ಎನ್ನುವುದರ ಮೇಲೆ ಅರ್ಥಗಳು ವ್ಯತ್ಯಾಸವಾಗುತ್ತವೆ.

ವಿ.ಎಸ್. ಹಿಂದೂಪುರ, ಬಳ್ಳಾರಿ

*ಸಿಹಿ ತಿನ್ನಲೆ? ಡಯಾಬಿಟಿಸ್; ಉಪ್ಪು ತಿನ್ನಲೆ? ಬಿ.ಪಿ; ಖಾರ ತಿನ್ನಲೆ? ಅಸಿಡಿಟಿ. ಏನು ತಿನ್ನಲಿ ಗುರು?*



ಡಾಕ್ಟರ್ ತಲೆ!

ಎಂ.ಬಿ. ರಂಗಪ್ಪಶೆಟ್ಟಿ, ಮೋಕ

*ಅಂದು ಅಜ್ಜ ಅಜ್ಜಿಯರು ಮನೆಯಲ್ಲಿ ಮೊಮ್ಮಕ್ಕಳಿಗೆ ರಾಜ ರಾಣಿಯರ ವೀರ ಕಥೆಗಳನ್ನು ಹೇಳುತ್ತಿದ್ದರು. ಈಗಿನ ಅಜ್ಜ ಅಜ್ಜಿಯರು?*

ಬಿಡುವಿಲ್ಲದ ಸೊಸೆ, ಮಕ್ಕಳು ಮೊಮ್ಮಕ್ಕಳಿಗೆ ಅಂದಿನಂದಿನ ಸೀರಿಯಲ್ ಕಥೆಗಳನ್ನು.

ನೀಲಗಂಗಾ ಬಿ. ನಿರಂಜಿ, ಹಾಬಾಳ

*ಸರ್ಕಾರಗಳು ಕಳ್ಳರ ಸಂಘಗಳು ಎಂದರೆ ಚೆನ್ನಾಗಿ ಒಪ್ಪುತ್ತದೆ. ನೀವೇನಂತೀರಿ?*

ಊಹೂಂ; ಸರ್ಕಾರದಲ್ಲಿ ಭಿನ್ನಮತ ತೋರಿದರೆ ಹಣ; ಕಳ್ಳರ ಸಂಘದಲ್ಲಿ ಭಿನ್ನಮತ ತೋರಿದರೆ ಹೆಣ.

■ ರಾಮ್